ಸಾಕ್ಷಿಯನ್ನು ದಿನಾಂಕ 03-08-2023 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ.ಎಂ ಎಸ್ ಬಿ ವಕೀಲರಿಂದಃ**

ಸಿ ಟಿ ಎಸ್ ನಂ.2193 ಮತ್ತು 2194 ಇವರೆಡನ್ನೂ ಸೇರಿ ಅಳತೆ ಮಾಡಿರುತ್ತೇನೆ ಎಂದರೆ ನಿಜ. ಆ ರೀತಿ ಎರೆಡೂ ಸೇರಿಸಿ ಅಳತೆ ಮಾಡುವಂತೆ ನ್ಯಾಯಾಲಯದ ನಿರ್ದೇಶನ ಇರಲಿಲ್ಲ ಎಂದರೆ ನಿಜ. ಅವರೆಡೂ ಸೇರಿಸಿ ಅಳತೆ ಮಾಡಿದ ನಂತರ ವಾದಿಯ ಹಿಸ್ಸೆ 37.4/9 ಚದರ ಯಾರ್ಡ ಎಂದು ನಮೂದಿಸಿದ್ದೇನೆ ಎಂದರೆ ನಿಜ. ಎರೆಡೂ ಆಸ್ತಿ ಇದ್ದಾಗ ಎರೆಡೂ ಆಸ್ತಿಗಳನ್ನು ಅಳತೆ ಮಾಡಿ ಪ್ರತಿ ಆಸ್ತಿಯಲ್ಲಿ ಹಿಸ್ಸೆ ಯಾವ ರೀತಿ ಕೊಡಬೇಕೆಂದು ನ್ಯಾಯಾಲಯಕ್ಕೆ ನಾನು ಸೂಚಿಸಬೇಕಾಗಿತ್ತು ಎಂದರೆ ಡಿಕ್ರಿಯಲ್ಲಿದ್ದ ಎಲ್ಲ ಆಸ್ತಿಗಳನ್ನು ಪರಿಗಣಿಸಿ ನಾನು ಅಳತೆ ಮಾಡಿ ಯಾವ ರೀತಿ ವಿಭಾಗ ಮಾಡಬಹುದು ಎಂದು ಸೂಚಿಸಿರುತ್ತೇನೆ ಎಂದು ನುಡಿಯುತ್ತೇನೆ. ಡಿಕ್ರಿ ಪ್ರಕಾರ ಮಾಡುತ್ತೇನೆಯೇ ಅಥವಾ ನನ್ನ ಆಯ್ಕೆ ಪ್ರಕಾರ ಮಾಡುತ್ತೇನೆಯೇ ಎಂದು ಕೇಳಿದರೆ ಡಿಕ್ರಿ ಪ್ರಕಾರ ಮಾಡುತ್ತೇನೆ ಎಂದು ನುಡಿಯುತ್ತೇನೆ. ನನ್ನ ಆಯ್ಕೆ ಪ್ರಕಾರ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎರೆಡೂ ಸಿಟಿ ಸರ್ವೆ ನಂಬರಗಳನ್ನು ಒಟ್ಟಾಗಿ ಅಳತೆ ಮಾಡಿ ವಾದಿಯ ಹಿಸ್ಸೆಯನ್ನು ನಾನು ಕಾಣಿಸಿರುವುದು ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ 2193 ನೇ ಸಿಟಿ ಸರ್ವೆ ನಂಬರ ಸ್ವತ್ತು ಕೇವಲ 4 ಸ್ಕ್ವೇರ್ ಯಾರ್ಡ್ ಅಳತೆ ಇದೆ ಹಾಗೂ 2194 ನೇ ಸಿಟಿಎಸ್ ನಂಬರ 221 ಸ್ಕ್ವೇರ್ ಯಾರ್ಡ್ ಅಳತೆ ಇದೆ ಹಾಗೂ ಆ ಕಾರಣದಿಂದ 2194 ರಲ್ಲಿ ಒಟ್ಟು ಕ್ಷೇತ್ರದ ಪೈಕಿ ವಾದಿಗೆ ಬರುವ ಹಿಸ್ಸೆಯ ಕುರಿತಂತೆ ಕ್ಷೇತ್ರವನ್ನು ಗುರ್ತಿಸಿ ಆ ರೀತಿ ಹಿಸ್ಸೆ ಮಾಡಬಹದು ಎಂದು ಅಭಿಪ್ರಾಯವನ್ನು ಸಚಿಸಿರುತ್ತೇನೆ. ಆ ರೀತಿ ನನ್ನ ಅಭಿಪ್ರಾಯ ಸೂಚಿಸಲು ಕಮಿಷನ್ ವಾರಂಟ್ ಇರುವುದೇ ಅಥವಾ ಡಿಕ್ರಿ ಪ್ರಕಾರ ಸ್ಕೀಂ ಫಾರ್ ಪಾರ್ಟಿಶನ್ ಮಾಡಿರುವುದೇ ಎಂದು ಕೇಳಿದರೆ ಡಿಕ್ರಿ ಪ್ರಕಾರ ಮಾಡಿರುವುದು ಎಂದು ನುಡಿಯುತ್ತೇನೆ. 2193 ರಲ್ಲಿ ವಾದಿಗೆ ಹಿಸ್ಸೆ ಕೊಟ್ಟಿಲ್ಲ ಎಂದು ಕಾಣಿಸಿರುವ ಕುರಿತಂತೆ ಆ ಸ್ವತ್ತಿನಲ್ಲಿ ಹಿಸ್ಸೆಯನ್ನು ನಾನು ಕಾಣಿಸಿದ್ದೇನೆ ಎಂದರೆ ಅದರ ಕ್ಷೇತ್ರವನ್ನು ಪರಿಗಣಿಸಿ 2194 ರಲ್ಲಿಯೇ ವಾದಿಗೆ ಬರುವ ಪೂರ್ತಿ ಹಿಸ್ಸೆಯ ಅಂಶವನ್ನು ಪ್ರತ್ಯೇಕಿಸಿ ಗುರ್ತಿಸಿದ್ದೇನೆ

ಎಂದು ನುಡಿಯುತ್ತೇನೆ. 2193 ನ್ನು ಯಾರಿಗೆ ಕೊಡಬಹುದು ಎಂದು ನಾನು ನನ್ನ ವರದಿಯಲ್ಲಿ ಸೂಚಿಸಿಲ್ಲ ಎಂದರೆ ನಿಜ. ಒಂದಕ್ಕಿಂತ ಹೆಚ್ಚು ಸ್ವತ್ತುಗಳು ವಿಭಾಗಕ್ಕೆ ಇದ್ದಲ್ಲಿ ಯಾವುದಾದರೂ ಒಂದು ಸ್ವತ್ತನ್ನು ಯಾವುದಾದರೂ ಒಂದು ಕಾರಣಕ್ಕೆ ಅಂದರೆ ಕಡಿಮೆ ಅಳತೆ ಇರುವ ಕಾರಣದಿಂದ ಅಥವಾ ಇತರೆ ಕಾರಣದಿಂದ ಡಿಕ್ರಿಯಲ್ಲಿ ಹೇಳಿರುವಂತೆ ವಿಭಾಗ ಮಾಡಲು ಬರುವುದಿಲ್ಲ ಎಂದು ಇದ್ದಲ್ಲಿ ನಾನು ಆ ಕುರಿತು ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕಾಗುತ್ತದೆ ಎಂದರೆ ಆ ರೀತಿ ಏನೂ ಇಲ್ಲ ಲಭ್ಯವಿರುವ ಕ್ಷೇತ್ರವನ್ನು ಪರಿಗಣಿಸಿ ನಾನು ವರದಿಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತೇನೆ. 2193 ನ್ನು ವಿಭಾಗ ಮಾಡಲು ಬರುವುದಿಲ್ಲ ಎಂದರೆ ಅದು ಕಡಿಮೆ ಕ್ಷೇತ್ರದ್ದು ಇದೆ ಎಂದು ನುಡಿಯುತ್ತೇನೆ. ಆ ರೀತಿ ಕಡಿಮೆ ಕ್ಷೇತ್ರ ಇರುವುದರಿಂದ ಅದನ್ನು ವಿಭಾಗ ಮಾಡಲು ಬರುವುದಿಲ್ಲವೆಂದು ನಾನು ವರದಿಯನ್ನು ಸಲ್ಲಿಸಿಲ್ಲ ಎಂದರೆ ನಿಜ. ನಿಸಿ.10 ನಕ್ಷೆಯಲ್ಲಿ 2194 ರಲ್ಲಿ ಈಗ ಪೆನ್ಸಿಲ್‌ನಲ್ಲಿ (ನ್ಯಾಯಾಲಯದ ಅನುಮತಿ ಮೇರೆಗೆ) ಗುರ್ತಿಸಿ ತೋರಿಸಿರುವ ಬಾಣದ ಗುರುತಿನಿಂದ ತೋರಿಸಿರುವ ದಕ್ಷಿಣೋತ್ತರ ಗೆರೆಯನ್ನು ಯಾಕೆ ಕಾಣಿಸಿರುವುದು ಎಂದು ಸದರಿ ನಕ್ಷೆಯಲ್ಲಿ ನಮೂದಿಸಿಲ್ಲ ಎಂದರೆ ನಿಜ. ಸದರಿ ಬಾಣದ ಗುರುತುಗಳನ್ನು ನ್ಯಾಯಾಲಯದ ಅನುಮತಿ ಮೇರೆಗೆ ಸದರಿ ಲೈನ್ ಯಾವುದು ಎಂದು ಗುರುತಿಸುವ ಉದ್ದೇಶದಿಂದ ಮಾಡಲಾಗಿದ್ದು ಸದರಿ ಲೈನ್ ಗಳನ್ನು ಗುರುತಿಸುವ ಬಾಣದ ಗೆರೆಯನ್ನು ನ್ಯಾಯಾಲಯವು ನೀಲಿ ಶಾಹಿಯಿಂದ ಇನ್ನೊಂದು ಬಾಣದ ಗುರುತು ಹಾಕಿ ಕೆಂಪು ಶಾಹಿಯನ್ನು ನಿಸಿ.10(ಎ) ಮತ್ತು (ಬಿ) ಎಂದು ಗುರುತಿಸಿರುತ್ತದೆ. ಸಿಟಿ ಸರ್ವೆ ನಂ.2194 ಯಾವ ಆಕಾರದಲ್ಲಿದೆ ಎಂದು ಕೇಳಿದರೆ ಇಂಗ್ಲೀಷಿನ ಕ್ಯಾಪಿಟಲ್ T ಅಕ್ಷರದ ಆಕಾರದಲ್ಲಿ ಇದೆ ಎಂದು ನುಡಿಯುತ್ತೇನೆ. ಎರೆಡೂಆಸ್ತಿಯ ಉದ್ದ ಅಗಲವನ್ನು ನಾನು ಖಡ್ಡಾಯವಾಗಿ ನಮೂದಿಸಿ ನಂತರ ನನ್ನ ಸದರಿ ಅಭಿಪ್ರಾಯವನ್ನು ಸೂಚಿಸಬೇಕಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಕ್ಷೆಯು ಸ್ಕೇಲ್ ಗೆ ಅನುಸಾರವಾಗಿ ಇದೆ ಹಾಗೂ ಆ ಪ್ರಕಾರ ಅಳತೆ ಮಾಡಿ ವರದಿ ಸಲ್ಲಿಸಿದ್ದೇನೆ. ಸದರಿ ಸ್ವತ್ತುಗಳ ಉದ್ದ ಎಷ್ಟು ಹಾಗೂ ಅಗಲ ಎಷ್ಟು ಎಂದು ನಾನು ನಮೂದಿಸಿಲ್ಲ ಎಂದರೆ ನಿಜ. ಅದನ್ನು ನಮೂದಿಸಿದರೆ ಸ್ವತ್ತು ವಿಭಾಗ ಮಾಡಲು ಸಾಧ್ಯವಿದೆಯೇ ಅಥವಾ ಇಲ್ಲವೇ ಎಂದು ಅಭಿಪ್ರಾಯ ರೂಪಿಸಲು ಸಾಧ್ಯವಿರುತ್ತೆ

ಎಂದರೆ ಸ್ಕೇಲ್ ಅನುಗುಣವಾಗಿ ಇರುವುದರಿಂದ ನಾನು ಆ ಪ್ರಕಾರವೇ ನಕ್ಷೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತೇನೆ. ಆ ರೀತಿ ನಕ್ಷೆಯು ಸ್ಕೇಲ್‌ಗೆ ಅನುಗುಣವಾಗಿದೆ ಎಂದು ನಮೂದಿಸಿಲ್ಲ ಎಂದರೆ 1:40 ಸ್ಕೇಲ್ ಅನುಸಾರವಾಗಿದೆ ಎಂದು ನಮೂದಿಸಿದ್ದೇನೆ ಎಂದು ನುಡಿಯುತ್ತೇನೆ. ಉಳಿಕೆ ಹಿಸ್ಸೆದಾರರಿಗೆ ದಕ್ಷಿಣಕ್ಕೆ ಹಿಸ್ಸೆಯನ್ನು ಕಾಣಿಸಿರುವ ಕುರಿತಂತೆ ಯಾವ ಕಡೆ ರಸ್ತೆ ಬಿಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಆ ರೀತಿ ರಸ್ತೆ ಎಂದು ನಮೂದಿಸಿಲ್ಲ ಆದರೆ ಪಶ್ಚಿಮದ ಕಡೆಗೆ ಬಿಟ್ಟಿರುವ ಜಾಗವು ಅಡ್ಡಾಡಲು ಇರುವ ಜಾಗವಾಗಿದ್ದು ಅಂದಾಜು 4 ಅಥವಾ 4.5 ಫೀಟ್ ಖುಲ್ಲಾ ಜಾಗ ಆ ಕಡೆ ಇದ್ದದ್ದನ್ನು ಅಡ್ಡಾಡಲು ಎಂದು ಪ್ರತ್ಯೇಕವಾಗಿ ಇರಿಸಿ ನಕ್ಷೆಯಲ್ಲಿ ಕಾಣಿಸಿದ್ದು ಅದರ ನಿಖರ ಅಳತೆಯನ್ನು ನಮ್ಮ ಇಲಾಖಾ ಸ್ಕೇಲ್ ನ್ನು ಬಳಸಿ ಲೆಕ್ಕ ಹಾಕಿ ಹೇಳಬಹುದು ಹಾಗೂ ಆ ಸ್ಕೇಲ್ ನ್ನು ಇಂದು ನ್ಯಾಯಾಲಯಕ್ಕೆ ತಂದಿಲ್ಲ ಆದರೆ ಸ್ಕೇಲ್ ಬಳಸಿ ನಿಖರ ಅಳತೆಯನ್ನು ನಕ್ಷೆಯಲ್ಲಿ ನೋಡಿ ಹೇಳಬಹುದು ಎಂದು ನುಡಿಯುತ್ತೇನೆ. 2193 ಮತ್ತು 2194 ಕ್ಷೆ ಸರ್ಕಾರಿ ರಸ್ತೆಯು ಉತ್ತರದ ಕಡೆ ಮಾತ್ರ ಇರುವುದು ಎಂದರೆ ನಿಜ. ಒಂದು ಸ್ವತ್ತನ್ನು ದಾಟಿ ಮತ್ತೊಂದು ಸ್ವತ್ತಿಗೆ ಅಡ್ಡಾಡಬೇಕಾದರೆ ರಸ್ತೆ ಎಷ್ಟು ಬಿಡಲಾಗಿದೆ ಎಂಬುದನ್ನು ವರದಿಯಲ್ಲಿ ಖಡ್ಡಾಯವಾಗಿ ನಮೂದಿಸಬೇಕಾಗುತ್ತದೆ ಎಂದರೆ ಸ್ಕೇಲ್ ಗೆ ಅನುಗುಣವಾಗಿ ರಸ್ತೆ ಮಾಡಿರುವುದರಿಂದ ಆ ರೀತಿ ನಮೂದಿಸಿಲ್ಲ ಆದರೆ ಅಡ್ಡಾಡಲು ಜಾಗ ಬಿಟ್ಟಿದ್ದೇನೆ ಎಂದು ನುಡಿಯುತ್ತೇನೆ. ಆ ರೀತಿ ಸ್ಕೇಲ್‌ಗೆ ಅನುಗುಣವಾಗಿ ಎಂದು ನಾನು ಹೇಳುತ್ತಿರುವುದು ಇಲಾಖೆಯ ಉಪಯೋಗಕ್ಕೆ ಬಳಕೆಯಾಗಬಹುದು ಹೊರತು ಈ ಪ್ರಕರಣದ ಪಕ್ಷಗಾರರಿಗೆ ತಿಳಿದು ಬರುವ ರೀತಿ ಅಲ್ಲಿ ಎಷ್ಟು ಅಗಲದ ರಸ್ತೆಯನ್ನು ಬಿಡಲಾಗಿದೆ ಎಂದು ನಾನು ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಿಲ್ಲ ಎಂದರೆ ಆ ರೀತಿ ಅಡ್ಡಾಡಲು ಬಿಟ್ಟಿರುವ ಜಾಗದ ಅಗಲವನ್ನು ಅಕ್ಷರಗಳಲ್ಲಿ ನನ್ನ ವರದಿಯಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತೇನೆ. 2194 ನೇ ಸ್ವತ್ತು ಒಟ್ಟು ಎಷ್ಟು ಅಗಲವಿದೆ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ.

**(ಈ ಹಂತದಲ್ಲಿ ಸದರಿ ಇಲಾಖಾ ಸ್ಕೇಲ್ ಇಲ್ಲದೇ ಸೂಕ್ತವಾಗಿ ಪ್ರಶ್ನೆಗೆ ಉತ್ತರಿಸಲು ಆಗುತ್ತಿಲ್ಲವಾದ್ದರಿಂದ ಕಾಲಾವಕಾಶವನ್ನು ಸಾಕ್ಷಿ ಕೋರಿದ್ದು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.